ನಗರವನ್ನು ಕಂಡ ರಾಮುವಿಗೆ ಖುಷಿಯಾಯಿತು. ಈಗ ಅಜ್ಜಿಯ ಮನೆ ತಲುಪುವುದೊಂದೇ ಬಾಕಿ. ವಿಳಾಸವನ್ನು ಯಾರಿಗಾದರೂ ತೋರಿಸಿ, ಸಹಾಯ ಪಡೆಯಲು ಕಿಸೆಗೆ ಕೈ ಹಾಕಿದ. ಆದರೆ, ಪತ್ರ ಸಿಗಲಿಲ್ಲ. ರಾಮು ಕಾಗದವನ್ನು ಕಳೆದುಕೊಂಡಿದ್ದ!

ಇನ್ನೊಮ್ಮೆ ಅವನಿಗೆ ಭಯವಾಯಿತು. ನಡಿಗೆಯ ಸುಸ್ತು ಬೇರೆ. ಆತ ಅಲ್ಲೇ ತಲೆಯೂರಿದ. ಗಾಢವಾದ ನಿದ್ದೆ ಆವರಿಸಿತು. ರಾಮುವಿಗೆ ಎಚ್ಚರವಾದಾಗ ಆತ ಯಾರದೋ ಮನೆಯಲ್ಲಿದ್ದ. ಆತ ಎದ್ದು ಕೂರುತ್ತಿದ್ದಂತೆ, ದಂಪತಿ ಇವನತ್ತ ಓಡಿ ಬಂದರು. ರಾಮು ತನ್ನ ಕತೆಯನ್ನು ಅವರಿಗೆ ಹೇಳಿದ. ‘ವಿಶಾಲವಾದ ಈ ನಗರದಲ್ಲಿ ಅಜ್ಜಿಯನ್ನು ಹುಡುಕುವುದು ಕಷ್ಟ. ನೀನು ವಾಪಸಾಗುವುದೂ ತರವಲ್ಲ. ನಮಗೂ ಮಕ್ಕಳಿಲ್ಲ. ನಾವು ದೇಗುಲದಲ್ಲಿ ಪೂಜೆಯನ್ನು ಮಾಡುತ್ತ ಜೀವನ ಸಾಗಿಸುತ್ತಿದ್ದೇವೆ. ನೀನು ಒಪ್ಪುವಿಯಾದರೆ, ನಮ್ಮ ಬಳಿಯೇ ಉಳಿದುಕೊ. ನಿನಗೆ ವಿದ್ಯಾಭ್ಯಾಸ ಹೇಳಿಕೊಡುತ್ತೇನೆ’ ಎಂದರು. ರಾಮು ಒಪ್ಪಿದ.

ರಾಮು ಶ್ರದ್ಧೆಯಿಂದ ಪಾಠ ಕಲಿತ. ಅವನ ಪರಿಶ್ರಮಕ್ಕೆ ಪ್ರತಿಫಲ ದೊರೆಯಿತು. ದೊಡ್ಡ ವಿದ್ವಾಂಸನೆಂದು ಗುರುತಿಸಿಕೊಂಡ. ಅವನ ಪಾಂಡಿತ್ಯದ ಖ್ಯಾತಿ ಎಲ್ಲೆಡೆ ಹರಡಿತು. ರಾಜನ ಆಸ್ಥಾನದಲ್ಲಿ ಮಂತ್ರಿಯಾಗಿ ಸೇರಿಕೊಂಡ. ತನ್ನನ್ನು ಸಾಕಿದ ದಂಪತಿ ಸಮೇತ ರಾಮು ರಾಜಧಾನಿಯಲ್ಲಿ ಸುಖವಾಗಿ ವಾಸಿಸತೊಡಗಿದ. ಇಷ್ಟೆಲ್ಲ ಸ್ಥಾನ, ಮಾನ ಸಿಕ್ಕ ಮೇಲೆ ರತ್ನಗಿರಿಗೆ ಒಮ್ಮೆ ಭೇಟಿ ನೀಡುವ ಆಸೆಯಾಯಿತು. ಅಲ್ಲಿಗೆ ತಲುಪಿದವನೇ ಜಮೀನುದಾರನ ಮನೆಯತ್ತ ತೆರಳಿದ. ಆ ಮನೆಯ ಜಾಗೆಯಲ್ಲಿ ಒಂದು ಪುಟ್ಟ ಗುಡಿಸಲಿತ್ತು. ಕುದುರೆಯ ನಡಿಗೆಯ ಸದ್ದು ಕೇಳಿ, ಮುದುಕಿಯೊಬ್ಬಳು ಹೊರಬಂದಳು. ರಾಮು ಆಕೆಯನ್ನು ಗುರುತಿಸಿ, ಕಾಲಿಗೆರಗಿದ. ಆಕೆ ತಮ್ಮ ಮನೆಗೆ ಬೆಂಕಿ ಬಿದ್ದು, ಅಪಾರ ನಷ್ಟವಾದದ್ದು, ಆ ದುಃಖದಲ್ಲೇ ಜಮೀನುದಾರ ಬಹುಕಾಲ ಹಾಸಿಗೆಯಲ್ಲಿ ನರಳಿ ಪ್ರಾಣ ಬಿಟ್ಟದ್ದು, ಇದ್ದ ಹೊಲ, ತೋಟಗಳನ್ನೆಲ್ಲ ಕಂಡಕಂಡವರು ವಶಪಡಿಸಿಕೊಂಡ ಕತೆ ಹೇಳಿ ಬಿಕ್ಕಿದಳು. ‘ನೀನಾದರೂ ಚೆನ್ನಾಗಿದ್ದಿಯಲ್ಲ. ಸಾಕು ಬಿಡು’ ಎಂದು ಅವನ ತಲೆಯನ್ನು ನೇವರಿಸಿದಳು. ‘ನೀವು ಅಂದು ನನ್ನನ್ನು ಮಗನ ಹಾಗೆ ಕಂಡಿರದಿದ್ದರೆ, ನಾನು ಈ ಸ್ಥಾನ, ಮಾನ ಪಡೆಯಲು ಸಾಧ್ಯವಾಗುತ್ತಿತ್ತಾ ಅಮ್ಮ? ಇವತ್ತಿಗೆ ನಿಮಗೂ ಈ ಊರಿನ ಋಣ ತೀರಿತು. ನೀವು ಇನ್ನು ನನ್ನೊಂದಿಗೇ ಇರಬೇಕು. ನಡೆಯಿರಿ’ ಎಂದು ಕುದುರೆಯ ಮೇಲೆ ಆಕೆಯನ್ನು ಕುಳ್ಳಿರಿಸಿಕೊಂಡು ರಂಭಾಪುರದತ್ತ ತೆರಳಿದ ರಾಮು. ■

# ಬೆಳಕಿನ ಹಬ್ಬ



ಸುರ್ ಸುರ್ ಸುರ್ ಸುರ್
ಸುರ್ಸುರ್ ಬತ್ತಿ
ಚುರು ಚುರು ಕಿಡಿಗಳ
ಹೊಮ್ಮಿಸಿ ಬೆಳಗುವ
ಸುಂದರ ಬತ್ತಿ

ಮತ್ ಮತ್ ಮತ್ ಮತ್
ಮತಾಪುಕಡ್ಡಿ
ಸುಂಯ್ ಸುಂಯ್ ಶಬ್ದವ
ಹೊರಡಿಸಿ ಬೆಳಗುವ
ಚಂದದ ಕಡ್ಡಿ

ಹುರ್ ಹುರ್ ಹುರ್ ಹುರ್
ಹೂವಿನ ಕುಂಡ
ಚಿಲುಮೆಯಂತೆ ಛಿಲ್ಲನೆ ಚಿಮ್ಮಿ
ಹೂವೇ ಆಗುವ
ಹೊನ್ನಿನ ಕುಂಡ

ಕರ್ ಕರ್ ಕರ್ ಕರ್
ಕೃಷ್ಣನ ಚಕ್ರ
ಗಿರ ಗಿರ ಗಿರ ಗಿರ
ಗಿರಗಟ್ಲೆ ಹೊಡೆಯುವ
ಗಿಲೀಟು ಚಕ್ರ

ಢಂ ಢಂ ಢಂ ಢಂ
ಢಮಾರು ಎನ್ನುವ
ಪಟಾಕಿಯೇ ಬೇಕೆ?
ಶಬ್ದ ಮಾಲಿನ್ಯದ
ಗೊಡವೆ ಏತಕೆ
ಬೆಳಕಿನ ಹಬ್ಬಕೆ?

■ **ಡಾ. ಕೆ.ಬಿ. ರಂಗಸ್ವಾಮಿ**
ಕಲೆ: ಸಂತೋಷ್ ಸಸಿಹಿತ್ಲು

## ಕುಂಚ ಪ್ರಪಂಚ



**ವಿಭಾ ಮುರಳಿ**
4ನೇ ತರಗತಿ, ಎಕ್ಸೆಲ್ ಪಬ್ಲಿಕ್ ಸ್ಕೂಲ್, ಮೈಸೂರು

